quickmarketreports.com

Date :16-02-2016

# ಭಾರತ ದಾಖಲೆ ಪ್ರಮಾಣದ ಗೋಧಿ ಆಮದು ಮಾಡುವ ಸಾಧ್ಯತೆ

ಪ್ರತಿಕೂಲ ಹವಾಮಾನ ಮತ್ತು ಇಳಿಕೆಯಾಗುತ್ತಿರುವ ದಾಸ್ತಾನನಂದ ಭಾರತ ಮುಂದಿನ ವರ್ಷದೊಳಗೆ ದಾಖಲೆ ಪ್ರಮಾಣದಲ್ಲಿ ಗೋಧಿ ಆಮದು ಮಾಡಬೇಕಾಗ ಬಹುದೆನ್ನಲಾಗಿದೆ. ಸತತ ಎರಡು ವರ್ಷಗಳಿಂದ ಸಾಮಾನ್ಯಕ್ಕಿಂತ ಕಡಿಮೆ ಮುಂಗಾರು ಮಳೆಯಿಂದ ಭಾರತದ ಗೋಧಿ ಬೆಳೆಗೆ ಬೇಕಾಗಿರುವುದಕ್ಕಿಂತ ತಾಪಮಾನ ಹೆಚ್ಚಳ ಮತ್ತು ಒಣ ಹವೆಯಿದೆ. ನಾಟಿಯ ಆರಂಭದಿಂದ ಈ ವರೆಗೆ ಒಣಹವಮಾನ ಹಾಗೂ ಆಗಾಗ ತಾಪಮಾನ ಹೆಚ್ಚಳದ ಸರದಿಗಳಿಂದ ಗೋಧಿ ಪೈರುಗಳು ಬಾಧಿತವಾಗ ಬಹುದೆನ್ನಲಾಗಿದೆ. ಅಕ್ಟೋಬರ್‌ನಲ್ಲಿ ನಾಟಿಗಿಂತ ಮುಂಚಿತವಾಗಿ ಸಾಕಷ್ಟು ಮಳೆ ಬೀಳುವಿಕೆಯ ಮೇಲೆ ಗೋಧಿ ಬೆಳೆ ಅವಲಂಬಿತವಾಗಿದೆಯೆನ್ನಲಾಗಿದೆ.

ಗೋಧಿ ದಾಸ್ತಾನು ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಆಹಾರ ಖಾತ್ರಿ ಮತ್ತು ಬೆಂಬಲ ದರಗಳಿಗಾಗಿ ಸರಕಾರಿ ಸ್ವಾಮ್ಯದ ಎಫ್‌ಸಿಐ ಅಗಾಧ ಪ್ರಮಾಣದಲ್ಲಿ ಗೋಧಿ ಖರೀದಿಸಿ ದಾಸ್ತಾನು ಮಾಡುತ್ತಿದೆ. ಆದರೆ 2012ನೇ ವರ್ಷದಿಂದೀಚೆಗೆ ಎಫ್‌ಸಿಐಯ ಒಟ್ಟು ದಾಸ್ತಾನು ಪ್ರಮಾಣ ಇಳಿಕೆ ಕಾಣುತ್ತಿದೆಯೆನ್ನಲಾಗಿದೆ. ಕಳೆದ 30 ವರ್ಷಗಳಿಂದ ಪ್ರಮುಖ ಕಾಳುಗಳಾದ ಗೋಧಿ ಮತ್ತು ಅಕ್ಕಿಯಲ್ಲಿ ಭಾರತ ಸ್ವಾವಲಂಬಿಯಾಗಿದ್ದು, ಸಾಮಾನ್ಯವಾಗಿ ಏರುತ್ತಿರುವ ಜನಸಂಖ್ಯೆಗನುಸಾರ ಸಾಕಷ್ಟು ಉತ್ಪಾದನೆ ಹಾಗೂ ದಾಸ್ತಾನು ಹೊಂದಲು ಸಾಧ್ಯವಾಗುತ್ತಿದೆ. ಆದರೆ, ದಾಸ್ತಾನು ಪ್ರಮಾಣದ ಇಳಿಕೆ ಹಾಗೂ ಪ್ರತಿಕೂಲ ಹವಮಾನಗಳಿಂದ ಗೋಧಿ ಲಭ್ಯತೆ ಅವಶ್ಯಕತೆಗಿಂತ ಕಡಿಮೆಯಾಗಬಹುದೆನ್ನಲಾಗಿದೆ.

2012–14ರ ಮಧ್ಯೆ ಭಾರತದ ಗೋಧಿ ಉತ್ಪಾದನೆ 95 ಮಿಲಿಯನ್ ಟನ್‌ಗಳ ಸನಹವಿತ್ತು ಮತ್ತು ಚೈನಾದ ನಂತರ ಎರಡನೇ ಅತಿ ಹೆಚ್ಚು ಗೋಧಿ ಉತ್ಪಾದಕ ದೇಶವಾಗಿದೆ. ಹಿಂದಿನ ವರ್ಷ ಉತ್ಪಾದನೆ ಹಿಂದಿನ 56 ವರ್ಷಗಳಲ್ಲಿ ಅತಿ ಹೆಚ್ಚು ಉತ್ಪಾದನಾ ಇಳಿಕೆಯ ವ್ಯತ್ಯಾಸವಾಗಿತ್ತೆನ್ನಲಾಗಿದೆ. ಮತ್ತು ಉತ್ಪಾದನೆ 7 ಮಿಲಿಯನ್ ಟನ್ ಇಳಿಕೆಯಾಗಿತ್ತು. 89 ಮಿಲಿಯನ್ ಟನ್‌ಗಳು ದೇಶದ 94 ಮಿಲಿಯನ್ ಟನ್‌ಗಳ ಬೇಡಿಕೆಗನುಗುಣವಾಗಿಲ್ಲವಾಗಿದ್ದು, ಈಗ ದಾಸ್ತಾನು ಇಳಿಕೆಯಾಗಿದೆಯೆನ್ನಲಾಗಿದೆ.